ಪಬ್ಲಿಕ್ ವರಕ್ಸ್.

ನಂ. 51. ತಾರೀಖು 4ನೇ ನವಂಬರ್ 1876.

ಅಸಿಸ್ಟೆಂಟ್ ಇಂಜನಿಯರ್ ಲೆಪೆನೆಂಟ್ ಬ್ಯೂಕ್ಸ್‌ಯವರನ್ನು ರೋಡ್ಸ್ ವ ಬಿಲ್ಡಿಂಗ್ಸ್ ಬ್ರಾಂಚ್ ಬೆಂಗಳೂರು ಕೋಲಾರ ಡಿವಿಜ್‌ನಿಂದ ಆರಿಗೇರ್ಷ ಬ್ರಾಂಚ್ ಹೇಮಾವತೀ ಡಿವಿಜನ್ನಿಗೆ ಹಂಗಾಮೀಯಾಗಿ ವರ್ಗಾಯಿಸಿರುತ್ತೆ

2. ಈ ವರ್ಗಾವರ್ಗಿಯು ಸರ್ಕಾರ ಪ್ರಯೋಜನಕ್ಕಾಗಿ ಮಾಡಲ್ಪಟ್ಟಿತು.

W. R. JOHNSON, *Lieut.-Col.*,
Offg. Secretary, P. W. D.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 10. ತಾರೀಖು 8ನೇ ನವಂಬರ್ 1876.

ಇಂಡ್ಯೆ ಗವರ್ಮೆಂಟ್ ಹೋಂ ಇಲಾಖಾ ಸಿಕ್ರಿಟೇರಿಯವರಿಂದ ಬಂದ 1876ನೇ ಇಸವಿ ಅಕ್ಟೋಬರ್ 21ನೇ ಮುಕ್ತಂ 1129ನೇ ನಂಬರ್ ಲೆಟರಿನಲ್ಲಿ ತಿಳಿಸಲ್ಪಟ್ಟ ಅಪ್ಪಣೇ ಅನುಸರಿಸಿ, 1875ನೇ ಇಸವಿ ಫಿಬ್ರವರಿ 20ನೇ ಮುಕ್ತಂ ಮೈಸೂರು ಗೆಜೆಟ್ 57ನೇ ಪುಟದಲ್ಲಿ ಘಾಯಿಷ್ ಮಾಡಲ್ಪಟ್ಟ ರೂಲಸ್‌ನ್ನು ರದ್ದುಪಡಿಸಿ ಹುಟ್ಟಿದ ಯಿದರಡಿ ಬರುವ ರೂಲಸ್ ಸರ್ವರಿಗೂ ತಿಳಿಯತಕ್ಕ ಬಗ್ಯೆ ಘಾಯಿಷ್ ಮಾಡಲ್ಪಟ್ಟಿರುತ್ತೆ.

ಕೊಡಗು ಸೀಮೆಯಲ್ಲಿ ದೇವರ ಕಾಡುಗಳ ಕಾಪಾಡುವಿಕೆ ಬಗ್ಯೂ ಯಿನ್ನು ಅಧಿಕವಾದ ವಿಚಾರಣೆ ಬಗ್ಯೂ ಉಂಟಾದ ರೂಲಸ್.

1. ಇದರಿಂದ ತಿಳಿಸಲ್ಪಡುವದೇನಂದರೆ,—ಕೊಡಗು ಸೀಮೆಯಲ್ಲಿ ದೇವರ ಕಾಡುಗಳಿಗೆ ಯಾವ ಬಗ್ಯಾಗಿ ಕಂದಾಯ ತಪ್ಪಿಸಲ್ಪಟ್ಟಿರುತ್ತೋ ಅಂತಾ ಬಗ್ಯೇನೆ ಅವುಗಳು ಖಂಡಿತವಾಗಿ ಉಪಯೋಗಿಸಲ್ಪಡದ ಪಕ್ಷಕ್ಕೆ ಅವುಗಳಿಗೆ ಐಯಿಂದ ಪೂರಾ ಕಂದಾಯ ದಾಖಲ್ಮಾಡಲ್ಪಡುವದು.

2. ಸರಕಾರದಿಂದ ಕೊಡಲ್ಪಟ್ಟು ವ ಕಂದಾಯ ಕಟ್ಟಲ್ಪಟ್ಟ ಅಂತಾ ದೇವರ ಕಾಡುಗಳು ಯಾ ಅವುಗಳ ಭಾಗಗಳು ಯಾರಿಗೆ ಕೊಡಲ್ಪಟ್ಟಿರುತ್ತೋ ಅಂತಾವರು ಅವುಗಳನ್ನು ಯಿರಿಸಿಕೊಳ್ಳುವದಕ್ಕೆ ಅಪ್ಪಣೇ ಕೊಡಲ್ಪಡುವರು, ಪರಂತು ಅಂತಾ ಹಿಡುವಳೀದಾರ್ರಿಂದ ವಾಸ್ತವವಾಗಿ ಅನುಭವಿಸಲ್ಪಡುವ ಬೀಜವರಿಯು ಯಷ್ಟು ಎಕರೆಯಾಗಿ ಕೊಡಲ್ಪಟ್ಟವೋ ಅದಕ್ಕಿಂತಲು ಜಾಸ್ತೀಯಾಗಿರಕೂಡದು.

3. ಅಂತಾ ಸನ್ನದುಗಳ ಪ್ರಕಾರ ಅನುಭವಿಸಲ್ಪಡುವ ಬೀಜವರಿಯು, ಕೊಡಲ್ಪಟ್ಟ ಬೀಜವರಿಗಿಂತಲು, ಹೆಚ್ಚಾಗಿರುವಂತೆ ಸರ್ವೇಯಲ್ಲಿ ಕಾಣಬಂದ ಪಕ್ಷದಲ್ಲಿ ಜಾಸ್ತೀ ಬೀಜವರಿಯು ಸರಕಾರದವರ ಇಛ್ಛಾನುಸಾರ ದೇವರಕಾಡಿಗೆ ವಾಪಸು ಸೇರಿಸಲ್ಪಡುವದು. ಅಥವಾ ಪೂರಾ ಕಂದಾಯ ಕಟ್ಟಲ್ಪಡುವದು.

4. ಯಾವ ಸಂಗತಿಗಳಲ್ಲಿ ದೇವರ ಕಾಡುಗಳು ಅಥವಾ ಅವುಗಳ ಪೈಕಿ ಯಾವ ಭಾಗಗಳು ಸರಕಾರದ ಅಪ್ಪಣೆ ಇಲ್ಲದೆ ವ್ಯವಸಾಯ ಮಾಡಲ್ಪಟ್ಟಿರುತ್ತವೋ ಅಂತಾ ಸಂಗತಿಗಳಲ್ಲಿ ಅವುಗಳ ಹಿಡುವಳೀದಾರ್ರುಗಳು ಅವುಗಳನ್ನು ಈ ಇಸ್ತಿಹಾರ್ ತಾರೀಕ್‌ಲಗಾಯಿತು 3 ವರುಷಗಳ ಪರಿಯಂತ ವ್ಯವಸಾಯ ಮಾಡತಕ್ಕ ಬಗ್ಯೆ ಅಪ್ಪಣೆ ಕೊಡಲ್ಪಡತಕ್ಕದ್ದು. ಆ ಬಳಿಕ ಅಂತಾ ಹಿಡುವಳೀದಾರ್ರುಗಳಿಂದ ಅಂತಾ ದೇವರ ಕಾಡುಗಳು ಮುಂದಕ್ಕೆ ವ್ಯವಸಾಯ ಮಾಡಲ್ಪಡುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತೆ. ಹಾಗೆ ವ್ಯವಸಾಯ ಮಾಡಲ್ಪಟ್ಟರೆ ಅವುಗಳು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದರಲ್ಲಿ ಬಂದೀತು.